## ಕರ್ನಾಟಕ ಸರ್ಕಾರ

ಸಂಖ್ಯೆ: ಕವಶಾಸಸ:ಆಸ:೦೩:೯೯–೨೦೦೦

ಕರ್ನಾಟಕ ವಸತಿ ಶಾಲೆಗಳ ಸಂಸ್ಥೆಗಳ ಸಂಘ,
ಐದನೇ ಮಹಡಿ, ಬಹು ಮಹಡಿಗಳ ಕಟ್ಟಡ,
(ನಿರ್ದೇಶಕರು, ಸಮಾಜ ಕಲ್ಯಾಣ
ಇಲಾಖೆ, ಕಛೇರಿ ),
ಬೆಂಗಳೂರು –೫೬೦೦೦೧.
ತಾರೀಖು: ೫–೨–೨೦೦೦.

ಎಸ್. ನಂಜುಂಡಯ್ಯ,
ಕಾರ್ಯನಿರ್ವಾಹಕ ನಿರ್ದೇಶಕರು.

ಮಾನ್ಯರೇ,

ವಿಷಯ:– ಮೊದಲನೆ ಆಡಳಿತ ಸಮಿತಿಯ ಸಭೆಯ ನಡವಳಿ.

– – – –

ತಾರೀಖು ೨–೨–೨೦೦೦ ರಂದು ನಡೆದ ಮೊದಲನೆ ಸಭೆಯ ನಡವಳಿಯನ್ನು ತಮ್ಮ ಅವಗಾಹನೆಗಾಗಿ ಮತ್ತು ಸಂಬಂಧಿಸಿದ ವಿಷಯದ ಬಗ್ಗೆ ಕ್ರಮಕ್ಕಾಗಿ ಸಲ್ಲಿಸಿದೆ.

ನಿಮ್ಮ ವಿಶ್ವಾಸಿ,

ಶ್ರೀ ರಾಜುಪ್ರೇಮ ಕುಮಾರ್ ಐ ಎ ಎಸ್.
ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಶ್ರೀ ಎಂ. ಆರ್ ಕಾಂಬ್ಳೆ ಐ. ಎ ಎಸ್,
ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಶ್ರೀ ರಜನೀಶ್ ಗೋಯಲ್ ಐ ಎ ಎಸ್,
ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

ಶ್ರೀ ವೀರಭದ್ರಾಚಾರಿ ಐ ಎ ಎಸ್,
ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು.

ಶ್ರೀ ಡಿ. ಆರ್. ರಾಜರಾಮ್
ಸಿ ಪಿ ಐ ಪರವಾಗಿ, ಬೆಂಗಳೂರು.

ಶ್ರೀ ಸಿಂಗ್, ಐ ಎ ಎಸ್.
ಉಪಕಾರ್ಯದರ್ಶಿಗಳು (೩), ಹಣಕಾಸು ಇಲಾಖೆ, ಬೆಂಗಳೂರು.

ಶ್ರೀ ಜಿತೇಂದ್ರ ನಾಯಕ್,
ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

ಶ್ರೀ
ಕಾರ್ಯದರ್ಶಿ, ಪ್ರೈಮರಿ ಮತ್ತು ಪ್ರೌಢಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.

## ಕರ್ನಾಟಕ ವಸತಿ ಶಾಲೆ ಸಂಸ್ಥೆಗಳ ಸಂಘ, ಬೆಂಗಳೂರು

**ದಿನಾಂಕ 2-2-2000 ಮಧ್ಯಾಹ್ನ 3-00 ಘಂಟೆಗೆ ನಡೆದ ಕರ್ನಾಟಕ ವಸತಿ ಶಾಲಾ ಸಂಸ್ಥೆಗಳ ಸಂಘದ ಆಡಳಿತ ಮಂಡಳಿಯ ಮೊದಲನೆ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದ ಸದಸ್ಯರು :

| | |
|---|---|
| 1. ಶ್ರೀ ರಾಜೀವ್‌ಕುಮಾರ ಐ ಎ ಎಸ್.,<br>ಕಾರ್ಯದರ್ಶಿಗಳು<br>ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2 ಶ್ರೀ ಎಂ ಆರ್ ಕಾಂಬ್ಳೆ ಐ ಎ ಎಸ್.,<br>ನಿರ್ದೇಶಕರು,<br>ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 3. ಶ್ರೀ ರಜನೀಶ ಗೋಯಲ್ ಐ ಎ ಎಸ್.,<br>ನಿರ್ದೇಶಕರು,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 4. ಶ್ರೀ ವೀರಭದ್ರಾಚಾರಿ ಐ ಎ ಎಸ್.,<br>ನಿರ್ದೇಶಕರು,<br>ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು | ಸದಸ್ಯರು |
| 5. ಶ್ರೀ ಡಿ ಆರ್ ರಾಜಾರಾಮ್<br>ಸಿ. ಪಿ. ಐ ಪರವಾಗಿ, ಬೆಂಗಳೂರು | ಸದಸ್ಯರು |
| 6. ಶ್ರೀ ಸಿಂಗ್ ಐ ಎ ಎಸ್.,<br>ಉಪಕಾರ್ಯದರ್ಶಿಗಳು (3)<br>ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| 7. ಶ್ರೀ ಜಿತೇಂದ್ರ ನಾಯಕ್<br>ನಿರ್ದೇಶಕರು,<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 8. ಎಸ್. ನಂಜುಂಡಯ್ಯ<br>ಕಾರ್ಯನಿರ್ವಾಹಕ ನಿರ್ದೇಶಕರು,<br>ಕರ್ನಾಟಕ ವಸತಿ ಶಾಲಾ ಸಂಸ್ಥೆಗಳ ಸಂಘ, ಬೆಂಗಳೂರು | ಸದಸ್ಯಕಾರ್ಯದರ್ಶಿಗಳು |

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಸಂಘದ ಅಧ್ಯಕ್ಷರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ, ಸಭೆಯ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದರು.

ಸಂಘದ ಬೈಲಾ ಹಾಗೂ ನಿಯಮಗಳ ಪರಿಶೀಲನೆ :

ಈ ಸಂಘವು ದಿನಾಂಕ 22-11-1999 ರಂದು ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ನೋಂದಣಿ ಅಧಿಕಾರಿಗಳಿಂದ ನೋಂದಣಿಯಾಗಿದೆ. ನೋಂದಣಿಯಾಗಲು ಸಲ್ಲಿಸಿದ ಬೈಲಾ ಮತ್ತು ಇತರೇ ನಿಯಮಗಳನ್ನು ಮಾನ್ಯ ಅಧ್ಯಕ್ಷರು ವಿವರಿಸಿದರು. ಬೈಲಾ ಹಾಗೂ ಇತರೇ ನಿಯಮಗಳನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ತಿದ್ದುಪಡಿಗಳಿಗೆ ಆಡಳಿತ ಸಮಿತಿ ಸೂಚನೆ ನೀಡಿದೆ.

ಅ) ''ಕಾರ್ಯದರ್ಶಿಗಳು'' ಎಂಬ ಪದನಾಮ ಎಲ್ಲೆಲ್ಲಿ ಇದೆಯೋ ಅಂತಹ ಕಡೆ ಕಾರ್ಯನಿರ್ವಾಹಕ ನಿರ್ದೇಶಕರು 'ಎಂದು 'ಓದಿಕೊಳ್ಳುವುದು ಮತ್ತು ತಿದ್ದುಪಡಿಗಳ ಅವಶ್ಯಕತೆ ಇದ್ದಲ್ಲಿ ನೋಂದಣಿ ಅಧಿಕಾರಿಯ ಮುಂದೆ ಪ್ರಸ್ತಾಪ ಪತ್ರವನ್ನು ಸಲ್ಲಿಸುವುದು.

ಆ) ಸಂಘದ ಆಡಳಿತ ಮಂಡಳಿಯನ್ನು ರಚಿಸುವಾಗ ಪದನಿಮಿತ್ತ ಸದಸ್ಯರನ್ನು 10 ಎಂದು ತೋರಿಸಲಾಗಿದೆ. ಇದನ್ನು 11 ಎಂದು ತಿದ್ದುಪಡಿ ಮಾಡಿಕೊಳ್ಳಲು ಆಡಳಿತ ಸಮಿತಿ ಒಪ್ಪಿಗೆ ನೀಡಿದೆ. ಈ ಆಡಳಿತ ಮಂಡಳಿಯ ಪದನಿಮಿತ್ತ ಸದಸ್ಯರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತ ಇಲಾಖೆಯವರನ್ನು ಸೇರಿಸುವುದು.

ಇ) ನಾಮ ನಿರ್ದೇಶನ ಸದಸ್ಯರ ಪೈಕಿ ವಸತಿ ಶಾಲೆಯ ಪ್ರಾಂಶುಪಾಲರು ಎಂಬುದನ್ನು ಕೈಬಿಡಬಹುದು. ಇದರಿಂದ ಒಟ್ಟು 11 ಜನ ಪದನಿಮಿತ್ತ ಸದಸ್ಯರುಗಳು, ಒಬ್ಬರು ನ್ಯಾಷನಲ್ ಕಾನ್ಸಿಲ್ ಆಫ್ ಎಜ್ಯುಕೇಷನ್ ರೀಸರ್ಚ್ ಅಂಡ್ ಟ್ರೈನಿಂಗ್ ವತಿಯಿಂದ ಸದಸ್ಯರಾಗಿರುತ್ತಾರೆ, ಹಾಗೂ 3 ವಿದ್ಯಾರಂಗಗಳಲ್ಲಿ ಶ್ರಮಿಸಿರುವ ಸದಸ್ಯರನ್ನು ಸರ್ಕಾರ ನೇಮಿಸಬಹುದಾಗಿದೆ. ಮೇಲೆ ತಿಳಿಸಿದ ತಿದ್ದುಪಡಿಗಳನ್ನು ಮಾಡಿಕೊಳ್ಳಲು ಆಡಳಿತ ಸಮಿತಿ ಒಪ್ಪಿಗೆ ನೀಡಿದೆ.

ಈ) ಬೈಲಾವನ್ನು ಸಲ್ಲಿಸುವಾಗ ಸಂಘದ ಅಧಿಕಾರಿಗಳಲ್ಲಿ, ಕಾರ್ಯದರ್ಶಿಗಳು ಉಪಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳೆಂದು ತೋರಿಸಲಾಗಿದೆ. ಇದಕ್ಕೆ ಬದಲು ಕಾರ್ಯನಿರ್ವಾಹಕ ನಿರ್ದೇಶಕರು ಎಂದು ತಿದ್ದುಪಡಿ ಮಾಡಿಕೊಂಡು, ಉಪಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳನ್ನು 'ಇತರೇ ಅಧಿಕಾರಿಗಳೆಂದು' ಈಗಾಗಲೇ ಸರ್ಕಾರಿ ಆಜ್ಞೆಯ ಸಂಖ್ಯೆ: ಎಸ್‌ಡಬ್ಲ್ಯುಡಿ:532:ಎಸ್‌ಇಡಬ್ಲ್ಯು:96:ದಿನಾಂಕ 6-10-99ರಂತೆ ಕರೆಯುವುದು.

**2. ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಇತರೇ ಹುದ್ದೆಗಳನ್ನು ಸರ್ಕಾರ ಸೃಷ್ಟಿಸಿರುವ ಬಗ್ಗೆ ಅನುಮೋದನೆ:**

ಸರ್ಕಾರವು ಶ್ರೀ ಎಸ್. ನಂಜುಂಡಯ್ಯ, ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ (ನಿ) ಬೆಂಗಳೂರು ಇವರನ್ನು ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಇ:188: ಎಸ್‌ಡಿಸಿ:99 ದಿನಾಂಕ 31-1-20000 ದಂದು ನೇಮಿಸಿದೆ.

ಇದಲ್ಲದೇ, ಸರ್ಕಾರವು ಪ್ರಾರಂಭಿಕವಾಗಿ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಿದೆ.

1. ಸಹಾಯಕ ನಿರ್ದೇಶಕರು -2
2. ಯೋಜನಾಧಿಕಾರಿಗಳು -3
3. ಯೋಜನಾ ಕಾರ್ಯನಿರ್ವಾಹಕರು :ಕಾರ್ಯನಿರ್ವಾಹಕ ಸಹಾಯಕರು -4
4. ಶಾಖೆ ಕಾಯುವವರು: ದಲಾಯಿತರು -2
5. ವಾಹನ ಚಾಲಕರು -2

ಅ) ಆಡಳಿತ ಸಮಿತಿಯು ಕಾರ್ಯನಿರ್ವಾಹಕ ನಿರ್ದೇಶಕರ ನೇಮಕಾತಿಗೆ ಅನುಮೋದನೆ ನೀಡಿದೆ.

ಆ) ಮೇಲೆ ತಿಳಿಸಿದ ಇತರೇ ಹುದ್ದೆಗಳಿಗೂ ಕೂಡ ಅನುಮೋದನೆ ನೀಡಿದೆ.

## ಇತರೇ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ:

ಸಂಘವು ಒಂದು ಕೇಂದ್ರ ಕಛೇರಿಯನ್ನು ಪೂರ್ಣಮಟ್ಟದಲ್ಲಿ ಸ್ಥಾಪಿಸಬೇಕಾಗಿರುವುದರಿಂದ ಪ್ರಾರಂಭಿಕವಾಗಿ ಸಹಾಯಕ ನಿರ್ದೇಶಕರು -1, ಕಾರ್ಯನಿರ್ವಾಹಕ ಸಹಾಯಕರು -2, ದಲಾಯತ್ -1, ವಾಹನ ಚಾಲಕರು -1, ನ್ನು ನೇಮಿಸಿಕೊಳ್ಳುವುದು. ಉಳಿದ ಹುದ್ದೆಗಳನ್ನು ತುಂಬಲು ಮುಂದಿನ ಆಡಳಿತ ಸಮಿತಿಯ ಮುಂದೆ ಅನುಮೋದನೆಗೆ ತರುವುದು. ಸಹಾಯಕ ನಿರ್ದೇಶಕರನ್ನು ಸಮಾಜ ಕಲ್ಯಾಣ ಇಲಾಖೆ ಅಥವಾ ಶಿಕ್ಷಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ಪಡೆಯುವಂತೆ ಆಡಳಿತ ಸಮಿತಿ ತೀರ್ಮಾನಿಸಿತು. ಕಾರ್ಯನಿರ್ವಾಹಕ ಸಹಾಯಕರನ್ನು ಭರ್ತಿಮಾಡುವ ಬಗ್ಗೆ, ಸದ್ಯಕ್ಕೆ ಯಾವುದಾದರೂ ಇಲಾಖೆಯಿಂದ ಎರವಲು ಪಡೆಯುವುದು, ಆದರಲ್ಲೂ ಕಂಪ್ಯೂಟರ ಜ್ಞಾನ ಇರುವವರನ್ನು ನೇಮಿಸಿಕೊಳ್ಳುವುದರಿಂದ ಚುರುಕಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಸಿಬ್ಬಂದಿಯ ನೇಮಕಾತಿಯ ನಿಯಮವನ್ನು ಇನ್ನು ಜಾರಿಗೆ ತರಬೇಕಾಗಿರುವುದರಿಂದ ವಾಣಿಜ್ಯ, ಕಂಪ್ಯೂಟರ ವಿದ್ಯಾಶಾಲೆಗಳಿಂದ 2 ಹುದ್ದೆಗಳನ್ನು ತುಂಬಲು ಪ್ರಯತ್ನಿಸುವುದು. ಹಣವನ್ನು (ವೇತನವನ್ನು) ನೇರವಾಗಿ ಕಂಪ್ಯೂಟರ ಅಥವಾ ವಾಣಿಜ್ಯ ವಿದ್ಯಾಶಾಲೆಗಳಿಗೆ ನೀಡುವ ವ್ಯವಸ್ಥೆ ಮಾಡಿಕೊಳ್ಳಲು ಆಡಳಿತ ಸಮಿತಿ ಅನುಮೋದನೆ ನೀಡಿದೆ.

## ಕಛೇರಿಗೆ ಬೇಕಾಗುವ ಸಾಮಾಗ್ರಿಗಳು:

ಕಛೇರಿಗೆ ಬೇಕಾಗುವ ಗಣಕಯಂತ್ರ, ಟೈಪರೈಟರ, ಅಲ್ಮೇರಾ, ಫ್ಯಾಕ್ಸ್‌ಮಿಷನ್, ಜೆರಾಕ್ಸ ಯಂತ್ರ, ದೂರವಾಣಿ ಹಾಗೂ ಪೀಠೋಪಕರಣಗಳನ್ನು ಸಂಘದ ಅಧ್ಯಕ್ಷರ ಅನುಮತಿ ಹಾಗೂ ನಿಯಮದಂತೆ ಖರೀದಿಸಲು ಆಡಳಿತ ಸಮಿತಿ ಅನುಮೋದನೆ ನೀಡಿತು.

## ಕಾರ್ಯನಿರ್ವಾಹಕ ನಿರ್ದೇಶಕರಿಗೆ ವಾಹನ ಒದಗಿಸುವ ಬಗ್ಗೆ:

ಕಾರ್ಯನಿರ್ವಾಹಕ ನಿರ್ದೇಶಕರಿಗೆ ಒಂದು ವಾಹನವನ್ನು ——— ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಖರೀದಿಸಲು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಮತ್ತು ಜೀಪನ್ನು ಇತರೇ ಅಧಿಕಾರಿಗಳನ್ನು ನೇಮಿಸಿಕೊಂಡಾಗ ಖರೀದಿಸಲು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಸದ್ಯಕ್ಕೆ ಕಾರ್ಯನಿರ್ವಾಹಕ ನಿರ್ದೇಶಕರು ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡು ಅಧ್ಯಕ್ಷರ ಅನುಮತಿಯ ಮೇರೆಗೆ ಇದರ ಖರ್ಚನ್ನು ಭರಿಸಬಹುದು.

<u>ಮುರಾರ್ಜಿ :ನವೋದಯ ಮಾದರಿಯ ವಸತಿ ಶಾಲೆಗಳನ್ನು ಸಂಘಕ್ಕೆ ವರ್ಗಾವಣೆ ಮಾಡುವ ಬಗ್ಗೆ:</u>

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆಗಳ ವತಿಯಿಂದ ಹಾಲಿ ನಡೆಸುತ್ತಿರುವ ಶಾಲೆಗಳನ್ನು ಸಂಘಕ್ಕೆ ವರ್ಗಾವಣೆ ಮಾಡಲು ಸರ್ಕಾರವನ್ನು ಕೋರಬೇಕೆಂದು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಆದರೆ 1999-2000ನೇ ಸಾಲು ಇನ್ನೆರಡು ತಿಂಗಳಲ್ಲಿ ಅಂತ್ಯವಾಗುವುದರಿಂದ, ಏಪ್ರಿಲ್-ಮೇ 2000ದಂದು ಈ ಶಾಲೆಗಳನ್ನು ವಶಕ್ಕೆ ತೆಗೆದುಕೊಳ್ಳಲು ಸಂಘ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುವುದು. ಈ ಶಾಲೆಗಳನ್ನು ವರ್ಗಾಯಿಸಿಕೊಳ್ಳಲು ಆಯಾಯ ಇಲಾಖೆಗಳ ನಿರ್ದೇಶಕರುಗಳ ಸಂಬಂಧಿಸಿದ ವ್ಯವಸ್ಥೆಗಳನ್ನು ರೂಪಿಸುವುದು.

ಹಾಲಿ ಇರುವ ಹಣ ಖರ್ಚಾಗದಿದ್ದಲ್ಲಿ, ಅದನ್ನು ಸಂಘಕ್ಕೆ ವರ್ಗಾಯಿಸಲು ಆಡಳಿತ ಸಮಿತಿ ಸರ್ಕಾರವನ್ನು ಕೋರಬೇಕೆಂದು ಒಪ್ಪಿಗೆ ನೀಡಿದೆ.

<u>ಸಂಘದ ಆಡಳಿತ ವೆಚ್ಚಕ್ಕಾಗಿ ನಿಗದಿಯಾಗಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ:</u>

ಸಮಾಜ ಕಲ್ಯಾಣ ಇಲಾಖೆಯವರ ಅಧೀನದಲ್ಲಿ ರೂ.50.00 ಲಕ್ಷಗಳು ಸಂಘಕ್ಕೆ ಈ ಸಾಲಿನ ಆಯವ್ಯಯದಲ್ಲಿ ನೀಡಬೇಕಾಗಿದೆ. ಅದನ್ನು ಬಿಡುಗಡೆ ಮಾಡುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಆಡಳಿತ ಸಮಿತಿ ಅನುಮೋದನೆ ನೀಡಿದೆ.

<u>ಬ್ಯಾಂಕು ಮತ್ತು ಪಿ ಡಿ ಖಾತೆಯನ್ನು ತೆರೆಯುವ ಬಗ್ಗೆ:</u>

ಸಂಘದ ವ್ಯವಹಾರಕ್ಕಾಗಿ ಬ್ಯಾಂಕಿನಲ್ಲಿ ಖಾತೆ ತೆರೆಯಲು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಆದರೆ ಚೆಕ್ಕನ್ನು ಸಹಿ ಮಾಡುವಾಗ ರೂ.1.00 ಲಕ್ಷದವರೆಗೆ ಕಾರ್ಯನಿರ್ವಾಹಕ ನಿರ್ದೇಶಕರು ಸಹಿ ಮಾಡಬಹುದು. ಆದರೆ ರೂ. 5,000-00 ಗಳಿಗಿಂತ ಹೆಚ್ಚಿನ ಮೊತ್ತದ ಖರ್ಚು ಬಂದಲ್ಲಿ ಅಧ್ಯಕ್ಷರ ಅನುಮೋದನೆಯನ್ನು ಕಡತದಲ್ಲಿ ಪಡೆಯಬೇಕೆಂದು ಆಡಳಿತ ಸಮಿತಿ ಅನುಮೋದನೆ ನೀಡಿದೆ.

ರೂ. 1-00 ಕ್ಕಿಂತ ಮೀರಿದ ಮೊತ್ತಕ್ಕೆ ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಅಧ್ಯಕ್ಷರು ಜಂಟಿಯಾಗಿ ಸಹಿ ಮಾಡಬೇಕೆಂದು ಆಡಳಿತ ಸಮಿತಿ ತೀರ್ಮಾನಿಸಿದೆ.

<u>ಹುಡಿಲ್ಯಾ ಸಾಲು :</u>

ಹಾಲಿ ಸಮಾಜ ಕಲ್ಯಾಣ ಇಲಾಖೆಯವರಿಂದ 40 ಮುರಾರ್ಜಿದೇಸಾಯಿ ವಸತಿ ಶಾಲೆಗಳು, 4 ನವೋದಯ ಮಾದರಿಯ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆ ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ 14 ಮುರಾರ್ಜಿದೇಸಾಯಿ ವಸತಿ ಶಾಲೆಗಳು ಹಾಗೂ 8 ನವೋದಯ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು 54 ಮುರಾರ್ಜಿ ದೇಸಾಯಿ ಶಾಲೆಗಳು ಹಾಗೂ 12 ನವೋದಯ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೇ ಈ ಸಾಲಿನಲ್ಲಿ 7 ಹೊಸ ಶಾಲೆಗಳು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮತ್ತು 4 ಹೊಸ ಶಾಲೆಗಳು ಅಲ್ಪಸಂಖ್ಯಾತರ

ಇಲಾಖೆಗಳ ವತಿಯಿಂದ ಪ್ರಾರಂಭವಾಗಬೇಕಾಗಿದೆ. ಎಲ್ಲಾ ಸೇರಿ ಒಟ್ಟು 77 ಶಾಲೆಗಳು ಮುಂದಿನ ಸಾಲಿನಿಂದ ಕಾರ್ಯನಿರ್ವಹಿಸುತ್ತವೆ. ಆದುದರಿಂದ ಈ 77 ಶಾಲೆಗಳ ಪೈಕಿ ಕೇವಲ 7 ವಸತಿ ಶಾಲೆಗಳಿಗೆ ಮಾತ್ರ ಕಟ್ಟಡ ನಿರ್ಮಾಣ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿವೆ. ಆದರೆ ಇದು ಪೂರ್ಣ ಪ್ರಮಾಣದಲ್ಲಿ ಇಲ್ಲ. ಇದೇ ರೀತಿ ಹಿಂದುಳಿದ ವರ್ಗಗಳ ಇಲಾಖೆಯ ವತಿಯಿಂದ 2 ಶಾಲೆಗಳ ಕಟ್ಟಡ ಮುಕ್ತಾಯವಾಗಿದೆ. ಒಂದು ಆರ ಸಿ ಸಿ ಹಂತದಲ್ಲಿ ಇದೆ. ಒಂದಕ್ಕೆ ತಳಪಾಯ ಹಾಕಲಾಗಿದೆ. ಅಂದರೆ ಒಟ್ಟು 11 ಶಾಲೆಗಳ ಕಟ್ಟಡ ವಿವಿಧ ಹಂತದಲ್ಲಿ ಇದೆಯೆಂದು ಪರಿಗಣಿಸಬಹುದಾಗಿದೆ. ಉಳಿದ 66 ಶಾಲೆಗಳಿಗೂ ಕಟ್ಟಡ ನಿರ್ಮಾಣವಾಗಬೇಕಾಗಿದೆ. ಹಾಲಿ ಕಟ್ಟಡ ನಿರ್ಮಾಣವಾಗುತ್ತಿರುವ ಶಾಲೆಗಳು ಪೂರ್ಣ ಮಟ್ಟದಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ನಿರ್ಮಾಣ ಮಾಡದೇ ಇರುವುದರಿಂದ, ಖರ್ಚು ಮಾಡಿರುವ ಹಣವನ್ನು ಮೂಲಧನವೆಂದು ಪರಿಗಣಿಸಿ ಎಲ್ಲಾ 77 ಶಾಲೆಗಳಿಗೂ ಹುಡ್ಕೋ ವತಿಯಿಂದ ಸಾಲ ಪಡೆಯಲು ಸರ್ಕಾರದ ನಿರ್ದೇಶದಂತೆ ಆಡಳಿತ ಸಮಿತಿ ಒಪ್ಪಿಗೆ ನೀಡಿದೆ. ಇದಕ್ಕೆ ಬೇಕಾಗುವ ಶೇ.20ರಷ್ಟು ಹಣವನ್ನು 2000-2001 ನೇ ಸಾಲಿನ ಆಯವ್ಯಯದಲ್ಲಿ ಆಯಾಯ ಇಲಾಖೆಗಳ ಆಯವ್ಯಯದಲ್ಲಿ ತೋರಿಸಲು ಕೋರಿಕೆ ಸಲ್ಲಿಸಬೇಕೆಂದು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಒಟ್ಟು 77 ಶಾಲೆಗಳಿಗೂ ತಲಾ ರೂ. 2-00 ಕೋಟಿಯಂತೆ, ಒಟ್ಟು ರೂ. 154-00 ಕೋಟಿ ಹಣ ಬೇಕಾಗುತ್ತದೆ. ಇದರಲ್ಲಿ ಶೇ. 20ರಷ್ಟು ಹಣವನ್ನು ಸರ್ಕಾರ ಭರಿಸಬೇಕಾಗಿದೆ. ಅಂದರೆ ರೂ. 31.8 ಕೋಟಿ ಹಣ ಸರ್ಕಾರದ ವತಿಯಿಂದ ಭರಿಸಬೇಕಾಗಿದೆ. 1999-2000ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ರೂ. 12.5 ಕೋಟಿ ಹಣವು ಈ ಬಾಬ್ತಿನಲ್ಲಿದ್ದು, ಸಮಾಜ ಕಲ್ಯಾಣ ಇಲಾಖೆಯು 51 ಶಾಲೆಗಳಿಗೆ ರೂ. 102 ಕೋಟಿ ಹಣ ಬೇಕಾಗಿದ್ದು ಇದರಲ್ಲಿ ಶೇ. 20 ರಷ್ಟು ಅಂದರೆ ರೂ.20.40 ಕೋಟಿ ಇಲಾಖೆಯ ವತಿಯಿಂದ ಭರಿಸಬೇಕಾಗಿದೆ. ಹಾಲಿ ಇರುವ ರೂ. 12.5ಕೋಟಿ ತೆಗೆದುಕೊಂಡರೆ, ಇನ್ನು ರೂ. 8.9 ಕೋಟಿಯಷ್ಟು ಹಣ ಮುಂದಿನ ಸಾಲಿನ ಆಯವ್ಯಯದಲ್ಲಿ ನಿಗದಿ ಪಡಿಸಬೇಕಾಗುತ್ತದೆ.

ಹಿಂದುಳಿದ ವರ್ಗಗಳ ಇಲಾಖೆಯಿಂದ ಒಟ್ಟು 22 ಶಾಲೆಗಳು ಇದ್ದು, ಈ 22 ಶಾಲೆಗಳಿಗೂ ರೂ. 44.00 ಕೋಟಿ ಹಣ ಬೇಕಾಗುತ್ತದೆ. ಇದರಲ್ಲಿ ಶೇ 20 ರಷ್ಟು ಅಂದರೆ ರೂ. 8.8 ಕೋಟಿ ಹಣವನ್ನು ಇಲಾಖೆಯ ಆಯವ್ಯಯದಲ್ಲಿ ಭರಿಸಬೇಕಾಗುತ್ತದೆ. ಈಗಾಗಲೇ ಇಲಾಖೆಯು ರೂ. 1.17 ಕೋಟಿ ಹಣವನ್ನು ಕಟ್ಟಡಕ್ಕಾಗಿ ಬಿಡುಗಡೆ ಮಾಡಿದೆ. ಬಾಕಿ ರೂ. 7.63 ಕೋಟಿ ಹಣವನ್ನು ಆಯವ್ಯಯದಲ್ಲಿ ಒದಗಿಸಬೇಕಾಗುತ್ತದೆ.

ಅಲ್ಪಸಂಖ್ಯಾತರ ಇಲಾಖೆ 4 ಶಾಲೆಗಳನ್ನು ತೆರೆಯಲು ಅನುಮೋದನೆ ಪಡೆದಿದೆ. ಈ 4 ಶಾಲೆಗಳಿಗೂ ರೂ. 8.00 ಕೋಟಿ ಹಣ ಬೇಕಾಗುತ್ತದೆ. ಇದರ ಬಾಬ್ತು ಶೇ 20ರಷ್ಟು ಅಂದರೆ ರೂ. 1.6 ಕೋಟಿ ಹಣವನ್ನು ಅಲ್ಪಸಂಖ್ಯಾತರ ಇಲಾಖೆಯ ಆಯವ್ಯಯದಲ್ಲಿ ಒದಗಿಸಬೇಕಾಗಿದೆ. ಒಂದು ವೇಳೆ ಸರ್ಕಾರ 2000-2001 ನೇ ಸಾಲಿನಲ್ಲಿ ಹೆಚ್ಚಿನ ವಸತಿ ಶಾಲೆಗಳನ್ನು ಮಂಜೂರು ಮಾಡಿದಲ್ಲಿ ಇದಕ್ಕೆ ಬೇಕಾಗುವ ಶೇ. 20 ರಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಲು ಆಯಾಯ

ಇಲಾಖೆಯ ನಿರ್ದೇಶಕರು ಕ್ರಮ ತೆಗೆದುಕೊಳ್ಳಬೇಕು. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕೂಡ ಇದರಲ್ಲಿ ಇರುವ ವಸತಿ ಶಾಲೆಗಳಿಗೆ ಬೇಕಾಗುವ ಹಣವನ್ನು ಅದರ ಆಯವ್ಯಯದಲ್ಲಿ ಒದಗಿಸಬೇಕಾಗಿದೆ. ಈ ಎಲ್ಲಾ ಹಣವನ್ನು ಎಲ್ಲಾ ಸಂಬಂಧಪಟ್ಟ ಇಲಾಖೆಗಳು ತಮ್ಮತಮ್ಮ ಆಯವ್ಯಯದಲ್ಲಿ ಬೇಕಾಗುವ ಶೇ. 20 ರಷ್ಟು ಹಣವನ್ನು ಒದಗಿಸಿ ಕೊಳ್ಳಲು ಕೋರಲಾಗಿದೆ. ಆಡಳಿತ ಸಮಿತಿ ಒಪ್ಪಿಗೆ ಸೂಚಿಸಿದೆ. ಬೇಕಾಗುವ ಹಣವನ್ನು ಪಡೆಯಲು 'ಹುಡ್ಕೋ' ಜೊತೆ ವ್ಯವಹರಿಸಬೇಕು. ಇಲ್ಲದೇ ಕಟ್ಟಡಗಳನ್ನು ಟರ್ನ್‌ಕೀ ಆಧಾರದ ಮೇಲೆ ನಿರ್ಮಾಣ ಮಾಡಲು ಬೇಕಾದ, ಹುಡ್ಕೋಗೆ ಮರುಪಾವತಿ ಮಾಡಬೇಕಾದ ಮೊತ್ತವನ್ನು ಮತ್ತು ಬಡ್ಡಿಯನ್ನು 2000-2001 ನೇ ಸಾಲಿನಿಂದ ಆಯವ್ಯಯದಲ್ಲಿ ಸಂಬಂಧಪಟ್ಟ ಇಲಾಖೆಯ ಆಯವ್ಯಯದಲ್ಲಿ ತೋರಿಸಬೇಕಾಗಿದೆ. ಅದನ್ನು ಕೂಡ ಆಯಾಯ ಇಲಾಖೆಯ ಕಡೆಯಿಂದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೂಡಲೇ. ಕಾರ್ಯನಿರ್ವಾಹಕ ನಿರ್ದೇಶಕರು ಮುಂದಿನ ಸಾಲಿನಲ್ಲಿ ಎಲ್ಲಾ ಕಟ್ಟಡಗಳನ್ನು ನಿರ್ಮಿಸಲು ಬೇಕಾಗುವ ಹುಡ್ಕೋ ಸಾಲ, ಸರ್ಕಾರದ ಅನುದಾನಕ್ಕಾಗಿ ಸಂಬಂಧಪಟ್ಟ ಇಲಾಖೆಗಳ ನಿರ್ದೇಶಕರುಗಳನ್ನು ಸಂಪರ್ಕಿಸಿ ಕಾರ್ಯಕ್ರಮಗಳನ್ನು ರೂಪಿಸುವುದು.

ಕೊನೆಯಲ್ಲಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೂ ವಂದಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ
(ರಾಜು ಪ್ರೇಮ ಕುಮಾರ),
ಅಧ್ಯಕ್ಷರು,
ಕ ವ ಶಾ ಸ ಸ,.

1. ಎಲ್ಲಾ ಸದಸ್ಯರಿಗೆ.

ಕಾರ್ಯನಿರ್ವಾಹಕ ನಿರ್ದೇಶಕರು

ಕರಡು

## ಕರ್ನಾಟಕ ವಸತಿ ಶಾಲೆ ಸಂಸ್ಥೆಗಳ ಸಂಘ, ಬೆಂಗಳೂರು

ನಡೆದ

ದಿನಾಂಕ: ೨-೨-೨೦೦೦ ಮಧ್ಯಾಹ್ನ ೩-೦೦ಘಂಟೆಗೆ: ಕರ್ನಾಟಕ ವಸತಿ ಶಾಲೆ ಸಂಸ್ಥೆಗಳ ಸಂಘದ
ಆಡಳಿತ ಮಂಡಳಿಯ ಮೊದಲನೆ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

೧. ಶ್ರೀ ರಾಜುಮ್ರೀಮುಕುಮಾರ್ ಐ ಎ ಎಸ್.,
ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು — ಅಧ್ಯಕ್ಷರು

೨. ಶ್ರೀ ಎಂ ಆರ್ ಕಾಂಬ್ಳೆ ಐ ಎ ಎಸ್.,
ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು — ಸದಸ್ಯರು

೩. ಶ್ರೀ ರಜನೀಶ್ ಗೋಯಲ್ ಐ ಎ ಎಸ್.,
ನಿರ್ದೇಶಕರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು — ಸದಸ್ಯರು

೪. ಶ್ರೀ ವೀರಭದ್ರಾಚಾರಿ ಐ ಎ ಎಸ್.,
ನಿರ್ದೇಶಕರು,
ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು — ಸದಸ್ಯರು

೫. ಶ್ರೀ ಡಿ ಆರ್ ರಾಜರಾಮ್
ಸಿ ಪಿ ಐ ಪರವಾಗಿ, ಬೆಂಗಳೂರು — ಸದಸ್ಯರು

೬. ಶ್ರೀ ಸಿಂಗ್ ಐ.ಎ.ಎಸ್
ಉಪ ಕಾರ್ಯದರ್ಶಿಗಳು, (೩)
ಹಣಕಾಸು ಇಲಾಖೆ, ಬೆಂಗಳೂರು — ಸದಸ್ಯರು

೭. ಶ್ರೀ ಜಿತೇಂದ್ರನಾಯಕ್
ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು — ಸದಸ್ಯರು

೮. ಎಸ್ ನಂಜುಂಡಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿಶಾಲೆ ಸಂಸ್ಥೆಗಳ ಸಂಘ, ಬೆಂಗಳೂರು — ಸದಸ್ಯಕಾರ್ಯದರ್ಶಿಗಳು

—

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಸಂಘದ ಅಧ್ಯಕ್ಷರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ, ಸಭೆಯ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದರು.

**ಸಂಘದ ಬೈಲಾ ಹಾಗೂ ನಿಯಮಗಳ ಪರಿಶೀಲನೆ:**

ಈ ಸಂಘವು ದಿನಾಂಕ: ೨೨-೧೧-೯೯ರಂದು ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ನೋಂದಣಿ ಅಧಿಕಾರಿಗಳಿಂದ ನೋಂದಣಿಯಾಗಿದೆ. ನೋಂದಣಿಯಾಗಲು ಸಲ್ಲಿಸಿದ ಬೈಲಾ ಮತ್ತು ಇತರೇ ನಿಯಮಗಳನ್ನು ಮಾನ್ಯ ಅಧ್ಯಕ್ಷರು ವಿವರಿಸಿದರು. ಬೈಲಾ ಹಾಗೂ ಇತರೇ ನಿಯಮಗಳನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ತಿದ್ದುಪಡಿಗಳಿಗೆ ಆಡಳಿತ ಸಮಿತಿ ಸೂಚನೆ ನೀಡಿದೆ.

........೨

ಅ) "ಕಾರ್ಯದರ್ಶಿಗಳು" ಎಂಬ ಪದನಾಮ ಎಲ್ಲೆಲ್ಲಿ ಇದೆಯೋ ಅಂತಹ ಕಡೆ "ಕಾರ್ಯನಿರ್ವಾಹಕ ನಿರ್ದೇಶಕರು" ಎಂದು ಓದಿಕೊಳ್ಳುವುದು ಮತ್ತು ತಿದ್ದುಪಡಿಗಳ ಅವಶ್ಯಕತೆ ಇದ್ದಲ್ಲಿ ನೋಂದಣಿ ಅಧಿಕಾರಿಯ ಮುಂದೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಆ) ಸಂಘದ ಆಡಳಿತ ಮಂಡಳಿಯನ್ನು ರಚಿಸುವಾಗ ಪದನಿಮಿತ್ತ ಸದಸ್ಯರನ್ನು ೧೦ ಎಂದು ಕಾಣಿಸಲಾಗಿದೆ. ಅದನ್ನು ೧೧ ಎಂದು ತಿದ್ದುಪಡಿ ಮಾಡಿಕೊಳ್ಳಲು ಆಡಳಿತ ಸಮಿತಿ ಒಪ್ಪಿಗೆ ನೀಡಿದೆ. ಈ ಆಡಳಿತ ಮಂಡಳಿಯ ಪದನಿಮಿತ್ತ ಸದಸ್ಯರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತ ಇಲಾಖೆಯವರನ್ನು ಸೇರಿಸುವುದು.

ಇ) ನಾಮನಿರ್ದೇಶನ ಸದಸ್ಯರ ಪೈಕಿ ವಸತಿ ಶಾಲೆಯ ಪ್ರಾಂಶುಪಾಲರು ಎಂಬುದನ್ನು ಕೈಬಿಡಬಹುದು. ಇದರಿಂದ ಒಟ್ಟು ೧೧ ಜನ ಪದನಿಮಿತ್ತ ಸದಸ್ಯರುಗಳು, ಒಬ್ಬರು ನ್ಯಾಷನಲ್ ಕೌನ್ಸಿಲ್ ಆಫ್ ಎಜ್ಯುಕೇಷನ್ ರಿಸರ್ಚ್ ಅಂಡ್ ಟ್ರೈನಿಂಗ್ ವತಿಯಿಂದ ಸದಸ್ಯರಾಗಿರುತ್ತಾರೆ. ಹಾಗೂ ೩ ವಿದ್ಯಾರಂಗಗಳಲ್ಲಿ ಶ್ರಮಿಸಿರುವ ಸದಸ್ಯರನ್ನು ಸರ್ಕಾರ ನೇಮಿಸಬಹುದಾಗಿದೆ. ಮೇಲೆ ತಿಳಿಸಿದ ತಿದ್ದುಪಡಿಗಳನ್ನು ಮಾಡಿಕೊಳ್ಳಲು ಆಡಳಿತ ಸಮಿತಿ ಒಪ್ಪಿಗೆ ನೀಡಿದೆ.

ಈ) ಬೈಲಾವನ್ನು ಸಲ್ಲಿಸುವಾಗ ಸಂಘದ ಅಧಿಕಾರಿಗಳಲ್ಲಿ, ಕಾರ್ಯದರ್ಶಿಗಳು, ಉಪಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳೆಂದು ತೋರಿಸಲಾಗಿದೆ. ಇದಕ್ಕೆ ಬದಲು ಕಾರ್ಯನಿರ್ವಾಹಕ ನಿರ್ದೇಶಕರು ಎಂದು ತಿದ್ದುಪಡಿ ಮಾಡಿಕೊಂಡು ಉಪಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳನ್ನು 'ಇತರೇ ಅಧಿಕಾರಿಗಳೆಂದು' ಈಗಾಗಲೇ ಸರ್ಕಾರಿ ಆಜ್ಞೆಯ ಸಂಖ್ಯೆ:ಎಸ್‌ಡಬ್ಲ್ಯೂಡಿ:೫೩೨:ಎಸ್‌ಡಬ್ಲ್ಯೂ:೯೭ ದಿನಾಂಕ:೬-೧೦-೯೭ದಂತೆ ಕರೆಯುವುದು.

೨. <u>ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಇತರೇ ಹುದ್ದೆಗಳನ್ನು ಸರ್ಕಾರ ಸೃಷ್ಟಿಸಿರುವ ಬಗ್ಗೆ ಅನುಮೋದನೆ:</u>

ಸರ್ಕಾರವು ಶ್ರೀ ಎಸ್ ನಂಜುಂಡಯ್ಯ, ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ(ನಿ) ಬೆಂಗಳೂರು ಇವರನ್ನು ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಕಇ:೧೫೮ಎಸ್‌ಡಿಸಿ:೯೯ದಿನಾಂಕ: ೩೧-೧-೩೦೦೦ರಂದು ನೇಮಿಸಿದೆ.

ಇದಲ್ಲದೇ, ಸರ್ಕಾರವು ಪ್ರಾರಂಭಿಕವಾಗಿ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಿದೆ.

೧. ಸಹಾಯಕ ನಿರ್ದೇಶಕರು — ೨

೨. ಯೋಜನಾಧಿಕಾರಿಗಳು — ೩

೩. ಯೋಜನಾ ಕಾರ್ಯನಿರ್ವಾಹಕರು :ಕಾರ್ಯನಿರ್ವಾಹಕ ಸಹಾಯಕರು — ೪

೪. ಕಾವಲು ಕಾಯುವವರು :ದಲಾಯಿತರು — ೨

೫. ವಾಹನ ಚಾಲಕರು ೨

ಉ) ಆಡಳಿತ ಸಮಿತಿಯು ಕಾರ್ಯನಿರ್ವಾಹಕ ನಿರ್ದೇಶಕರ ನೇಮಕಾತಿಗೆ ಅನುಮೋದನೆ ನೀಡಿದೆ.

೬) ~~ಉಳಿದ~~ ಮೇಲ್ಕೆ ತಿಳಿಸಿದ ಇತರೆ ಹುದ್ದೆಗಳಿಗೂ ಕೂಡ ಅನುಮೋದನೆ ನೀಡಿದೆ.

ಇತರೇ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ:

ಸಂಘವು ಒಂದು ಕೇಂದ್ರ ಕಛೇರಿಯನ್ನು ಪೂರ್ಣಪ್ರಮಾಣದಲ್ಲಿ ಸ್ಥಾಪಿಸಬೇಕಾಗಿರುವುದರಿಂದ ಪ್ರಾರಂಭಿಕವಾಗಿ ಸಹಾಯಕ ನಿರ್ದೇಶಕರು — ೧, ಕಾರ್ಯನಿರ್ವಾಹಕ ಸಹಾಯಕರು — ೨ ದಲಾಯಿತ — ೧, ವಾಹನ ಚಾಲಕರು — ೧, ನ್ನು ನೇಮಿಸಿಕೊಳ್ಳುವುದು. ಉಳಿದ ಹುದ್ದೆಗಳನ್ನು ತುಂಬಲು ಮುಂದಿನ ಆಡಳಿತ ಸಮಿತಿಯ ಮುಂದೆ ಅನುಮೋದನೆಗೆ ತರುವುದು. ಸಹಾಯಕ ನಿರ್ದೇಶಕರನ್ನು ಸಮಾಜ ಕಲ್ಯಾಣ ಇಲಾಖೆ ಅಥವಾ ಶಿಕ್ಷಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ಪಡೆಯುವಂತೆ ಆಡಳಿತ ಸಮಿತಿ ತೀರ್ಮಾನಿಸಿತು. ಕಾರ್ಯನಿರ್ವಾಹಕ ಸಹಾಯಕರನ್ನು ಭರ್ತಿಮಾಡುವ ಬಗ್ಗೆ, ಸದ್ಯಕ್ಕೆ ಯಾವುದಾದರೂ ಇಲಾಖೆಯಿಂದ ಎರವಲು ಪಡೆಯುವುದು ಅದರಲ್ಲೂ ಕಂಪ್ಯೂಟರ್ ಜ್ಞಾನ ಇರುವವರನ್ನು ನೇಮಿಸಿಕೊಳ್ಳುವುದರಿಂದ ಚುರುಕಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಸಿಬ್ಬಂದಿಯ ನೇಮಕಾತಿಯ ~~ನಡುವಳಿಯನ್ನು~~ ನಿಯಮಾವಳಿಗಳ ಇನ್ನು ಜಾರಿಗೆ ತರಬೇಕಾಗಿರುವುದರಿಂದ ವಾಣಿಜ್ಯ/ಕಂಪ್ಯೂಟರ್ ವಿದ್ಯಾಶಾಲೆಗಳಿಂದ ೨ ಹುದ್ದೆಗಳನ್ನು ತುಂಬಲು ಪ್ರಯತ್ನಿಸುವುದು. ಹಣವನ್ನು (ವೇತನವನ್ನು) ನೇರವಾಗಿ ಕಂಪ್ಯೂಟರ್ ಅಥವಾ ವಾಣಿಜ್ಯ ವಿದ್ಯಾಶಾಲೆಗಳಿಗೆ ನೀಡುವ ವ್ಯವಸ್ಥೆ ಮಾಡಿಕೊಳ್ಳಲು ಆಡಳಿತ ಸಮಿತಿ ಅನುಮೋದನೆ ನೀಡಿದೆ.

ಕಛೇರಿಗೆ ಬೇಕಾಗುವ ಸಾಮಗ್ರಿಗಳು:

ಕಛೇರಿಗೆ ಬೇಕಾಗುವ ಗಣಕಯಂತ್ರ, ಟೈಪ್‌ರೈಟರ್ ...ಮೆರಾ, ಫ್ಯಾಕ್ಸ್‌ಮಿಷನ್, ಜೆರಾಕ್ಸ್ ಯಂತ್ರ, ದೂರವಾಣಿ, ಹಾಗೂ ಪೀಠೋಪಕರಣಗಳು ಇತ್ಯಾದಿಗಳನ್ನು ಸಂಘದ ಅಧ್ಯಕ್ಷರ ಅನುಮತಿ ಹಾಗೂ ನಿಯಮದಂತೆ ಖರೀದಿಸಲು ಆಡಳಿತ ಸಮಿತಿ ಅನುಮೋದನೆ ನೀಡಿತು.

ಕಾರ್ಯನಿರ್ವಾಹಕ ನಿರ್ದೇಶಕರಿಗೆ ವಾಹನ ಒದಗಿಸುವ ಬಗ್ಗೆ: ಕಾರ್ಯನಿರ್ವಾಹಕ ನಿರ್ದೇಶಕರಿಗೆ ಒಂದು ವಾಹನವನ್ನು ಸದ್ಯಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಖರೀದಿಸಲು ಆಡಳಿತ ಸಮಿತಿ ಅನುಮೋದನೆ ನೀಡಿದೆ ಮತ್ತು ಜೀಪನ್ನು ಇತರೇ ಅಧಿಕಾರಿಗಳನ್ನು ನೇಮಿಸಿಕೊಂಡಾಗ ಖರೀದಿಸಲು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಸದ್ಯಕ್ಕೆ ಕಾರ್ಯನಿರ್ವಾಹಕ ನಿರ್ದೇಶಕರು ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡು ಅಧ್ಯಕ್ಷರ ಅನುಮತಿಯ ಮೇರೆಗೆ ಇದರ ಖರ್ಚನ್ನು ಭರಿಸುವುದು.

~~೨ ಮತ್ತು ೪~~

ಮುಖಾರ್ಜಿ: ನವೋದಯ ಮಾದರಿಯ ವಸತಿ ಶಾಲೆಗಳನ್ನು ಸಂಘಕ್ಕೆ ವರ್ಗಾವಣೆ ಮಾಡುವ ಬಗ್ಗೆ.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆಗಳ

ವತಿಯಿಂದ ಹಾಲಿ ನಡೆಸುತ್ತಿರುವ ಶಾಲೆಗಳನ್ನು ಸಂಸ್ಥೆಗೆ ವರ್ಗಾವಣೆ ಮಾಡಲು ಸರ್ಕಾರವನ್ನು ಕೋರಬೇಕೆಂದು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಆದರೆ ೧೯೯೯-೨೦೦೦ನೇ ಸಾಲು ಇನ್ನೆರಡು ತಿಂಗಳಲ್ಲಿ ಅಂತ್ಯವಾಗುವುದರಿಂದ ಏಪ್ರಿಲ್-ಮೇ ೨೦೦೦ದಂದು ಈ ಶಾಲೆಗಳನ್ನು ವಶಕ್ಕೆ ತೆಗೆದುಕೊಳ್ಳಲು ಸಂಸ್ಥೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುವುದು. [illegible] ಈ ಶಾಲೆಗಳನ್ನು ವರ್ಗಾಯಿಸಿಕೊಳ್ಳಲು ಆಯಾ ಇಲಾಖೆಗಳ ನಿರ್ದೇಶಕರುಗಳ ಸಂಬಂಧಿಸಿದ ವ್ಯವಸ್ಥೆಗಳನ್ನು ಮಾಡಿಸುವುದು.

ಹಾಲಿ ಇರುವ ಹಣ ಖರ್ಚಾಗದಿದ್ದಲ್ಲಿ, ಅದನ್ನು ಸಂಸ್ಥೆಕ್ಕೆ ವರ್ಗಾಯಿಸಲು ಆಡಳಿತ ಸಮಿತಿ ಸರ್ಕಾರವನ್ನು ಕೋರಬೇಕೆಂದು ಒಪ್ಪಿಗೆ ನೀಡಿದೆ.

ಸಂಸ್ಥೆಯ ಆಡಳಿತ ವೆಚ್ಚಕ್ಕಾಗಿ ನಿಗದಿಯಾಗಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಸಮಾಜ ಕಲ್ಯಾಣ ಇಲಾಖೆಯವರ ಅಧೀನದಲ್ಲಿ ರೂ.೫೦.೦೦ಲಕ್ಷಗಳು ಸಂಸ್ಥೆಗೆ ಈ ಸಾಲಿನ ಆಯವ್ಯಯದಲ್ಲಿ ನೀಡಬೇಕಾಗಿದೆ. ಅದನ್ನು ಬಿಡುಗಡೆ ಮಾಡುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಆಡಳಿತ ಸಮಿತಿ ಅನುಮೋದನೆ ನೀಡಿದೆ.

ಬ್ಯಾಂಕು ಮತ್ತು ಪಿ ಡಿ ಖಾತೆಯನ್ನು ತೆರೆಯುವ ಬಗ್ಗೆ:

ಸಂಸ್ಥೆಯ ವ್ಯವಹಾರಕ್ಕಾಗಿ ಬ್ಯಾಂಕಿನಲ್ಲಿ ಖಾತೆ ತೆರೆಯಲು ಆಡಳಿತ ಸಮಿತಿ ಅನುಮೋದನೆ ನೀಡಿದೆ. ಆದರೆ ಚೆಕ್ಕನ್ನು ಸಹಿ ಮಾಡುವಾಗ ರೂ.೧.೦೦ಲಕ್ಷದವರೆಗೆ ಕಾರ್ಯನಿರ್ವಾಹಕ ನಿರ್ದೇಶಕರು ಸಹಿ ಮಾಡಬಹುದು. ಆದರೆ ರೂ.೫,೦೦೦-೦೦ಗಳಿಗಿಂತ ಹೆಚ್ಚಿನ ಮೊತ್ತದ ಖರ್ಚು ಬಂದಲ್ಲಿ ಅಧ್ಯಕ್ಷರ ಅನುಮೋದನೆಯನ್ನು ಕಡತದಲ್ಲಿ ಪಡೆಯಬೇಕೆಂದು ಆಡಳಿತ ಸಮಿತಿ ಅನುಮೋದನೆನೀಡಿದೆ.

ರೂ.೧.೦೦ಲಕ್ಷಕ್ಕಿಂತ ಮೀರಿದ ಮೊತ್ತಕ್ಕೆ ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಅಧ್ಯಕ್ಷರು ಜಂಟಿಯಾಗಿ ಸಹಿ ಮಾಡಬೇಕೆಂದು ಆಡಳಿತ ಸಮಿತಿ ತೀರ್ಮಾನಿಸಿದೆ.

ಹುಡಿಯೋಕ್ಕೆ ಸಾಲ:

ಹಾಲಿ ಸಮಾಜ ಕಲ್ಯಾಣ ಇಲಾಖೆಯವರಿಂದ ೪೦ ಮೊರಾರ್ಜಿದೇಸಾಯಿ ವಸತಿ ಶಾಲೆಗಳು, ೪ ನವೋದಯ ಮಾದರಿಯ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆ, ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ೧೪ ಮೊರಾರ್ಜಿದೇಸಾಯಿ ವಸತಿ ಶಾಲೆಗಳು ಹಾಗೂ ೮ ನವೋದಯ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು ೫೪ ಮೊರಾರ್ಜಿ ದೇಸಾಯಿ ಶಾಲೆಗಳು ಹಾಗೂ ೧೨ ನವೋದಯ ಶಾಲೆಗಳು ಕಾರ್ಯನಿರ್ವಹಿಸುತ್ತಿದೆ. ಇದಲ್ಲದೇ ಈ ಸಾಲಿನಲ್ಲಿ ೭ ಹೊಸ ಶಾಲೆಗಳು ಸಮಾಜ ಕಾಲ ಕಲ್ಯಾಣ ಇಲಾಖೆಯ ವತಿಯಿಂದ ಮತ್ತು ೪ ಹೊಸ ಶಾಲೆಗಳು ಅಲ್ಪಸಂಖ್ಯಾತರ ಇಲಾಖೆಗಳ ವತಿಯಿಂದ ಪ್ರಾರಂಭವಾಗಬೇಕಾಗಿದೆ. ಎಲ್ಲಾ ಸೇರಿ ಒಟ್ಟು ೭೭ ಶಾಲೆಗಳು ಮುಂದಿನ ಸಾಲಿನಿಂದ ಕಾರ್ಯನಿರ್ವಹಿಸುತ್ತವೆ.

ಆದುದರಿಂದ ಈ ೭೭ ಶಾಲೆಗಳ ಪೈಕಿ ಕೇವಲ ೭ ವಸತಿ ಶಾಲೆಗಳಿಗೆ ಮಾತ್ರ ಕಟ್ಟಡ ನಿರ್ಮಾಣ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿದೆ. ಆದರೆ ಇದು ಪೂರ್ಣ ಪ್ರಮಾಣ ದಲ್ಲಿ ಇಲ್ಲ. ಇದೇ ರೀತಿ ಹಿಂದುಳಿದ ವರ್ಗಗಳ ಇಲಾಖೆಯ ವತಿಯಿಂದ ೨ ಶಾಲೆಗಳ ಕಟ್ಟಡ ಮುಕ್ತಾಯವಾಗಿದೆ. ಒಂದು ಆರ್ ಸಿ ಸಿ ಹಂತದಲ್ಲಿ ಇದೆ. ಒಂದಕ್ಕೆ ತಳಪಾಯ ಹಾಕಲಾಗಿದೆ. ಅಂದರೆ ಒಟ್ಟು ೧೧ ಶಾಲೆಗಳ ಕಟ್ಟಡ ವಿವಿದ ಹಂತದಲ್ಲಿ ಇದೆಯೆಂದು ಪರಿಗಣಿಸಬಹುದಾಗಿದೆ. ಉಳಿದ ೬೬ ಶಾಲೆಗಳಿಗೂ ಕಟ್ಟಡ ನಿರ್ಮಾಣವಾಗಬೇಕಾಗಿದೆ. ಹಾಲಿ ಕಟ್ಟಡ ನಿರ್ಮಾಣವಾಗುತ್ತಿರುವ ಶಾಲೆಗಳು ಪೂರ್ಣ ಮಟ್ಟದಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ನಿರ್ಮಾಣ ಮಾಡದೇ ಇರುವುದರಿಂದ ಹಾಲಿ ಖರ್ಚು ಮಾಡಿರುವ ಹಣವನ್ನು ಮೂಲಧನವೆಂದು ಪರಿಗಣಿಸಿ ~~ಸರ್ಕಾರದ ವಶಕ್ಕೆ~~ ತೆಗೆದುಕೊಂಡು ಎಲ್ಲಾ ೭೭ ಶಾಲೆಗಳಿಗೂ ಹುಡ್ಕೋ ವತಿಯಿಂದ ಸಾಲ ಪಡೆಯಲು ಸರ್ಕಾರದ ಆದೇಶದಂತೆ ಆಡಳಿತ ಸಮಿತಿ ಒಪ್ಪಿಗೆ ನೀಡಿದೆ. ಇದಕ್ಕೆ ಬೇಕಾಗುವ ಶೇ.೨೦ರಷ್ಟು ಹಣವನ್ನು ೨೦೦೦-೨೦೦೧ನೇ ಸಾಲಿನ ಆಯವ್ಯಯದಲ್ಲಿ ಆಯಾ ಇಲಾಖೆಗಳಲ್ಲಿ ಆಯವ್ಯಯದಲ್ಲಿ ಕಾಯ್ದಿರಿಸಬೇಕೆಂದು ಇದಕ್ಕೆ ಕೋರಿಕೆ ಸಲ್ಲಿಸಬೇಕೆಂದು ಆಡಳಿತ ~~ಇಲಾ~~ ಸಮಿತಿ ಅನುಮೋದನೆ ನೀಡಿದೆ. ಒಟ್ಟು ೭೭ ಶಾಲೆಗಳಿಗೂ ತಲಾ ರೂ.೨.೦೦ಕೋಟಿಯಂತೆ ಒಟ್ಟು ರೂ.೧೫೪.೦೦ಕೋಟಿಗಳಷ್ಟು ಹಣ ಬೇಕಾಗುತ್ತದೆ. ಇದರಲ್ಲಿ ಶೇ.೨೦ರಷ್ಟು ಹಣವನ್ನು ಸರ್ಕಾರ ಭರಿಸಬೇಕಾಗಿದೆ. ಅಂದರೆ ರೂ.೩೧.೮ಕೋಟಿ ಹಣ ಸರ್ಕಾರದ ವತಿಯಿಂದ ಭರಿಸಬೇಕಾಗಿದೆ. ೧೯೯೯-೨೦೦೦ನೇ ಸಾಲಿನಲ್ಲಿ ಸಮಾಜ ಕಲ್ಯಾಣದ ವತಿಯಿಂದ ರೂ.೧೨.೫ಕೋಟಿ ಹಣದ ಬಾಬ್ತಿನಲ್ಲಿದ್ದು ಸಮಾಜ ಕಲ್ಯಾಣ ಇಲಾಖೆಯು ೫೧ ಶಾಲೆಗಳಲ್ಲಿ ರೂ.೧೦೨ಕೋಟಿ ಹಣ ಬೇಕಾಗಿದ್ದು ಅದರಲ್ಲಿ ಶೇ.೨೦ರಷ್ಟು ಅಂದರೆ ರೂ.೨೦.೪ಕೋಟಿ ಇಲಾಖೆಯ ವತಿಯಿಂದ ಭರಿಸಬೇಕಾಗಿದೆ. ಹಾಲಿ ಇರುವ ರೂ.೧೨.೫ಕೋಟಿ ತೆಗೆದುಕೊಂಡರೆ ಇನ್ನು ರೂ.೭.೯ಕೋಟಿಯಷ್ಟು ಹಣ ಮುಂದಿನ ಸಾಲಿನ ಆಯವ್ಯಯದಲ್ಲಿ ನಿಗದಿ ಪಡಿಸಬೇಕಾಗುತ್ತದೆ.

ಹಿಂದುಳಿದ ವರ್ಗಗಳ ಇಲಾಖೆಯಿಂದ ಒಟ್ಟು ೨೨ ಶಾಲೆಗಳು ಇದ್ದು, ಈ ೨೨ ಶಾಲೆಗಳಿಗೂ ರೂ.೪೪.೦೦ಕೋಟಿ ಹಣಬೇಕಾಗುತ್ತದೆ. ಇದರಲ್ಲಿ ಶೇ.೨೦ರಷ್ಟು ಅಂದರೆ ರೂ.೮.೮ಕೋಟಿ ಹಣವನ್ನು ಇಲಾಖೆಯ ಆಯವ್ಯಯದಲ್ಲಿ ಭರಿಸಬೇಕಾಗುತ್ತದೆ. ಈಗಾಗಲೇ ಇಲಾಖೆಯು ರೂ.೧.೧೭ಕೋಟಿ ಹಣವನ್ನು ಕಟ್ಟಡಕ್ಕಾಗಿ ಬಿಡುಗಡೆ ಮಾಡಿದೆ. ಬಾಕಿ ರೂ.೭.೬೩ಕೋಟಿ ಹಣವನ್ನು ಆಯವ್ಯಯದಲ್ಲಿ ಒದಗಿಸಬೇಕಾಗುತ್ತದೆ.

ಅಲ್ಪಸಂಖ್ಯಾತರ ಇಲಾಖೆ ೪ ಶಾಲೆಗಳನ್ನು ತೆರೆಯಲು ಅನುಮೋದನೆ ಪಡೆದಿದೆ. ಈ ೪ ಶಾಲೆಗಳಿಗೂ ರೂ.೮.೦೦ಕೋಟಿ ಹಣ ಬೇಕಾಗುತ್ತದೆ. ಇದರ ಬಾಬ್ತು ಶೇ.೨೦ರಷ್ಟು ಅಂದರೆ ರೂ.೧.೬ಕೋಟಿ ಹಣವನ್ನು ಅಲ್ಪಸಂಖ್ಯಾತರ ಇಲಾಖೆಯ ಆಯವ್ಯಯದಲ್ಲಿ ಒದಗಿಸಬೇಕಾಗಿದೆ. ಒಂದು ವೇಳೆ ಸರ್ಕಾರ ೨೦೦೦-೨೦೦೧ನೇ ಸಾಲಿನಲ್ಲಿ ಹೆಚ್ಚಿನ ವಸತಿ ಶಾಲೆಗಳನ್ನು ಮಂಜೂರು ಮಾಡಿದಲ್ಲಿ ಇದಕ್ಕೆ ಬೇಕಾಗುವ ಶೇ.೨೦ರಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಲು ಆಯಾ ಇಲಾಖೆಯ ನಿರ್ದೇಶಕರು ಕ್ರಮ ಕೈಗೊಳ್ಳಬೇಕು. ಪರಿಶಿಷ್ಟ

ವರ್ಗಗಳ ಕಲ್ಯಾಣ ಇಲಾಖೆ ಕೂಡ ಇದರಲ್ಲಿ ಇರುವ ವಸತಿ ಶಾಲೆಗಳಿಗೆ ಬೇಕಾಗುವ ಹಣವನ್ನು ಅದರ ಆಯವ್ಯಯದಲ್ಲಿ ಒದಗಿಸಬೇಕಾಗಿದೆ. ಈ ಎಲ್ಲಾ ಹಣವನ್ನು ಎಲ್ಲಾ ಸಂಬಂಧಪಟ್ಟ ಇಲಾಖೆಗಳು ತಮ್ಮ ತಮ್ಮ ಆಯವ್ಯಯದಲ್ಲಿ ಬೇಕಾಗುವ ಶೇ.೨೦ರಷ್ಟು ಹಣವನ್ನು ಒದಗಿಸಿಕೊಳ್ಳಲು ಕೋರಲಾಗಿದೆ. ಆಡಳಿತ ಸಮಿತಿ ಒಪ್ಪಿಗೆ ಸೂಚಿಸಿದೆ.

ಹುಡ್ಕೋ : ಬೇಕಾಗುವ ಹಣವನ್ನು ಪಡೆಯಲು ಹುಡ್ಕೋ ~~ಸಮಿತಿಯ~~ ಜೊತೆ ವ್ಯವಹರಿಸಬೇಕು. ಅಲ್ಲದೇ ಕಟ್ಟಡಗಳನ್ನು ಟರ್ನ್ ಕೀ ಆಧಾರದ ಮೇಲೆ ನಿರ್ಮಾಣ ಮಾಡಲು ಕೂಡ ಹುಡ್ಕೋ ನೀತಿ ನಿಯಮಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಆಡಳಿತ ಸಮಿತಿ ಅನುಮೋದನೆ ನೀಡಿದೆ. ಹುಡ್ಕೋಗೆ ಮರುಪಾವತಿ ~~ಆದ~~ ಮಾಡಬೇಕಾದ ಮೊತ್ತವನ್ನು ಮತ್ತು ಬಡ್ಡಿಯನ್ನು ೨೦೦೮-೨೦೦೯ನೇ ಸಾಲಿನಿಂದ ಆಯವ್ಯಯದಲ್ಲಿ ಸಂಬಂಧಪಟ್ಟ ಇಲಾಖೆಯ ಆಯವ್ಯಯದಲ್ಲಿ ತೋರಿಸಬೇಕಾಗಿದೆ. ಅದನ್ನು ಕೂಡ ಆಯಾಯ ಇಲಾಖೆಯ ವತಿಯಿಂದ ಕ್ರಮ ಕೈಗೊಳ್ಳಬೇಕಾಗುತ್ತದೆ. ~~[illegible]~~ ಕೂಡಲೇ ಕಾರ್ಯನಿರ್ವಾಹಕ ನಿರ್ದೇಶಕರು ಮುಂದಿನ ಸಾಲಿನಲ್ಲಿ ಎಲ್ಲಾ ಕಟ್ಟಡಗಳನ್ನು ನಿರ್ಮಿಸಲು ಬೇಕಾಗುವ ಹುಡ್ಕೋ ಸಾಲ, ಸರ್ಕಾರದ ಅನುದಾನಕ್ಕಾಗಿ ~~[illegible]~~ ಸಂಬಂಧಪಟ್ಟ ಇಲಾಖೆಗಳ ನಿರ್ದೇಶಕರು ಇವರೊಡನೆ ಚರ್ಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು.

ಕೊನೆಯಲ್ಲಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೂ ವಂದಿಸುತ್ತಾ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ರಾಜು ಪ್ರೇಮ ಕುಮಾರ್)
ಅಧ್ಯಕ್ಷರು
ಕ ವ ಶಾ ಸ ಸ.

೧) ಎಲ್ಲಾ ಸದಸ್ಯರಿಗೆ

NAME OF THE OFFICERS PRESENT IN THE MEETING HELD ON 2.2.2000 AT 3.00 P.M. IN THE CHAMBERS OF THE SECRETARY SOCIAL WELFARE.

3/4

| SL. NO. | NAME & DESIGNATION | Signature |
|---|---|---|
| 1. | M.R. Kamble<br>Director, Social Welfare | [illegible] |
| 2) | Jitkendra Nayak<br>Director Tribal welfare | [illegible] 2/2 |
| 3) | Rajnish Goel<br>Director Backward classes | [illegible] |
| 4) | Veerabhadrachari<br>Director of Minorities Dept. | [illegible] |
| 5) | D.R. Rajaram.<br>D.D.P.I. CPI office.<br>Bangalore. | D.R. Rajaram |
| 6) | NK Singh<br>DS III, F.D. | [illegible] |